ಕನ್ನಡಿಗರ ಭಾವಕೋಶದಲ್ಲಿನ ಒಂದು ಅಪೂರ್ವ ಸ್ಮೃತಿ–ಚೈತನ್ಯ 'ರಾಜಕುಮಾರ್'. ಸಿನಿಮಾದ ಮೂಲ ಉದ್ದೇಶವಾದ ರಂಜನೆಯನ್ನು ಮೀರಿ, ಜನರ ವಿವೇಕವನ್ನು ಎಚ್ಚರಿಸುವ ಹಾಗೂ ಜೀವನವನ್ನು ವಿಮರ್ಶಿಸುವ ಕೆಲಸವನ್ನು ರಾಜ್ ಸಿನಿಮಾಗಳು ಸದ್ದಿಲ್ಲದೆ ಮಾಡಿವೆ. ಕುಟುಂಬ ಮೌಲ್ಯಗಳನ್ನು ಬಲಪಡಿಸುವ, ಸಾಮಾಜಿಕ ಸಾಮರಸ್ಯವನ್ನು ಹಂಬಲಿಸುವ ವರನಟನ ಸಿನಿಮಾಗಳಿಗೆ ಈ ಹೊತ್ತಿನ ಸಂಕಟಗಳಿಗೆ ಹಿತ್ತಲಮದ್ದಾಗುವ ಶಕ್ತಿಯಿದೆ. ಏಪ್ರಿಲ್ 12 ರಾಜ್ ಚಿರಸ್ಮರಣೆಯ, ಏಪ್ರಿಲ್ 24 ರಾಜ್ ಹುಟ್ಟುಹಬ್ಬದ ದಿನ. ಸಂಸ್ಕೃತಿಪಠ್ಯಗಳ ರೂಪದಲ್ಲಿ ನಮ್ಮೊಂದಿಗಿರುವ ರಾಜ್ ಸಿನಿಮಾಗಳನ್ನು ಸಮಕಾಲೀನ ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ ನೋಡುವುದಕ್ಕೆ ಏಪ್ರಿಲ್‌ನ 'ರಾಜಮಾಸ' ಒಂದು ಅರ್ಥಪೂರ್ಣ ನೆಪ.

ಸೂರ್ಯೋದಯ ಎನ್ನುವುದು ಪರಿಸರದಲ್ಲಿ ಜೀವಸಂಚಾರ ಉಂಟಾಗುವ ಅಮೃತಕ್ಷಣ. ಚಿ. ದತ್ತರಾಜ್ ನಿರ್ದೇಶನದ 'ಕಾಮನಬಿಲ್ಲು' ಸಿನಿಮಾದಲ್ಲೂ ಸೂರ್ಯೋದಯದೊಂದಿಗೆ ಜೀವಸಂಚಾರವಿದೆ. ಆದರೆ, ಇಲ್ಲಿನ ಜೀವದಾಯಿನಿ ಸೂರ್ಯನೇ ಬೇರೆ. ಈ ಸೂರ್ಯನಾರಾಯಣ ಭಗವಂತನಲ್ಲ – ಮನುಷ್ಯ!

ಸಿನಿಮಾ ಆರಂಭವಾಗುವುದು ಕಥಾನಾಯಕ ಸೂರ್ಯನಾರಾಯಣ, ಮೇಷ್ಟ್ರ ಮನೆಗೆ ಕಾಫಿ ಕುಡಿಯಲು ಬರುವುದರೊಂದಿಗೆ. ಮೇಷ್ಟ್ರ ಹೆಂಡತಿ ಅಂಬಕ್ಕನಿಗೆ, ಸೂರ್ಯನಾರಾಯಣನಿಗೆ ಕಾಫಿ ಮಾಡಿಕೊಡುವ ಮೂಲಕವೇ ದಿನಚರಿ ಆರಂಭವಾಗಬೇಕು. 'ಜಗತ್ತಿಗೆಲ್ಲ ಒಂದು ಸೂರ್ಯೋದಯವಾದರೆ, ಸೂರ್ಯನಾರಾಯಣ ತಮ್ಮ ಮನೆಗೆ ಕಾಲಿಟ್ಟಾಗಲೇ ಸೂರ್ಯೋದಯ' ಎನ್ನುವ ನಂಬಿಕೆ ಮೇಷ್ಟರದು. ಆ ಮನೆಯ ಮುದ್ದಿನ ಮಗಳು ಪದ್ಮಜಾ ಪೋಲಿಯೊಪೀಡಿತೆ. ಅಮ್ಮ ಕೊಟ್ಟ ರವೆ ಉಂಡೆಯನ್ನು ಬಚ್ಚಿಟ್ಟುಕೊಂಡು ಕೊಡುವಷ್ಟು ಅವಳಿಗೆ ಸೂರ್ಯನಾರಾಯಣನ ಬಗ್ಗೆ ಅಕ್ಕರೆ. ಮೇಷ್ಟ್ರ ಮನೆಯವರ ಪ್ರೀತಿಯನ್ನುಂಡ ನಂತರ ಕಥಾನಾಯಕನ ಸವಾರಿ ಶೆಟ್ಟರ ಅಂಗಡಿ ಕಡೆಗೆ. 'ಸೂರ್ಯನಾರಾಯಣ ವಚ್ಚಾಡು' ಎಂದು ದೇವರೇ ಬಂದಷ್ಟು ಸಂಭ್ರಮಿಸುವ ಶೆಟ್ಟರು ಹಾಗೂ ಅವರ ಪತ್ನಿ ಇಬ್ಬರೂ ಕಥಾನಾಯಕನಿಗೆ ಮಿಠಾಯಿ ತಿನ್ನಿಸುತ್ತಾರೆ. ಅವರ ಪಾಲಿಗೆ ಸೂರ್ಯನಾರಾಯಣ ತಾವು ಕಳೆದುಕೊಂಡ ಮಗನ ಜೀವಂತರೂಪ. ಹೀಗೆ ಸೂರ್ಯನಾರಾಯಣ ಎನ್ನುವ ಯುವಕ ಊರಿನ ಹಲವರಿಗೆ ಸಂತಸದ ಬೆಳಕು ಹಂಚುವ ರಾಯಭಾರಿಯಂತೆ ಕಾಣಿಸುತ್ತಾನೆ.

'ಕಾಮನಬಿಲ್ಲು' ಚಿತ್ರದ ಆರಂಭದ ದೃಶ್ಯಗಳನ್ನು ನೆನಪಿಸಿಕೊಳ್ಳಲಿಕ್ಕೆ ಕಾರಣ, ಕಥಾನಾಯಕ ಸೂರ್ಯನಾರಾಯಣನಿಗೂ ಆ ಪಾತ್ರವನ್ನು ಪೋಷಿಸಿರುವ ರಾಜ್‌ಕುಮಾರ್ ಅವರಿಗೂ ಇರುವ ಅಭಿನ್ನತೆ. ಸೂರ್ಯನಾರಾಯಣನನ್ನು ಕಂಡು ಊರಿನ ಜನ ಸಂತಸಪಟ್ಟಂತೆ, ರಾಜ್ ಅವರನ್ನು ಕಂಡು–ನೆನೆದು ನಾಡಿನ ಜನರೂ ಸಂತಸಪಟ್ಟಿದ್ದಾರೆ. ಸಿನಿಮಾದ ಕಥಾನಾಯಕ ಯಾರೋ ಒಬ್ಬರಿಗೆ ಮಗನಾದಂತೆ, ಗೆಳೆಯನಾದಂತೆ, ಸಖನಾದಂತೆ, ರಾಜ್ ಅವರೂ ನಾಡಿನ ಜನಸಾಮಾನ್ಯರ ಪಾಲಿಗೆ ಅವರ ಅಂತರಂಗದ ಒಡನಾಡಿಯಾಗಿ ಒದಗಿಬಂದಿದ್ದಾರೆ. ಸಮಕಾಲೀನ ಸಂದರ್ಭದಲ್ಲಿ ಇಂಥ ವ್ಯಕ್ತಿತ್ವ–ವರ್ಚಸ್ಸು ಸಿನಿಮಾ ಮಾತ್ರವಲ್ಲ, ಸಮಾಜದ ಯಾವ ಕ್ಷೇತ್ರದ ನಾಯಕನಲ್ಲೂ ಇಲ್ಲ ಎನ್ನುವುದು ರಾಜ್‌ರ ಅನನ್ಯತೆಯನ್ನು ಮತ್ತೂ ಹೆಚ್ಚಿಸುವಂತಿದೆ.

ರಾಜ್‌ಕುಮಾರ್ ಅವರನ್ನು ಕನ್ನಡಿಗರು ಬರಿಯ ನಟನಾಗಿಯಷ್ಟೇ ನೋಡಲಿಲ್ಲ. ಉದಾರಚರಿತರನ್ನು ಗೌರವಿಸುತ್ತಲೇ ಅಂತರದಲ್ಲಿಡುವಂತೆ ದೂರ ಮಾಡಲೂ ಇಲ್ಲ. ತಮ್ಮ ಭಾವಕೋಶದ ಒಂದು ಭಾಗವಾಗಿ ವರನಟನನ್ನು ಗುರ್ತಿಸಿಕೊಳ್ಳುವ ಮೂಲಕ ರಾಜ್ ಹಾಗೂ ತಮ್ಮ ನಡುವಿನ ಅಂತರವನ್ನು ಕುಗ್ಗಿಸಿದರು. ಇಷ್ಟಪಡಲಿಕ್ಕೆ, ಪ್ರೀತಿಸಲಿಕ್ಕೆ, ಆರಾಧಿಸಲಿಕ್ಕೆ ನಮ್ಮ ನಡುವೆ ಸಾಕಷ್ಟು ನಟರಿದ್ದಾರೆ, ಕಲಾವಿದರಿದ್ದಾರೆ. ಆದರೆ, ಅವರಲ್ಲಿ ಅಂತರಂಗದಲ್ಲಿ ಸ್ಥಾನ ಪಡೆಯುವವರು ಎಷ್ಟು ಜನ? ಅಂಥ ಅಪೂರ್ವ ಸಾಧ್ಯತೆ ಕನ್ನಡ ಸಂದರ್ಭದಲ್ಲಿ ಬಹು ವ್ಯಾಪಕವಾಗಿ ದೊರೆತದ್ದು ರಾಜ್‌ಗೆ ಮಾತ್ರ. ಕನ್ನಡ ಮಾತ್ರವೇನು, ಹೀಗೆ ಜನಮಾನಸದ ಭಾಗವಾದ ಭಾಗ್ಯ ಭಾರತದಲ್ಲಿ ದೊರೆತಿರುವುದು ಬೆರಳೆಣಿಕೆ ಚೇತನಗಳಿಗೆ ಮಾತ್ರ. ಅಂತಹವರಲ್ಲಿ ರಾಜ್ ಒಬ್ಬರೆನ್ನುವುದು ಕನ್ನಡನಾಡಿನ ಹೆಮ್ಮೆ.

ರಾಜ್ ಜನರೊಂದಿಗೆ ಒಡನಾಡಿ ಅವರ ಪ್ರೀತಿ ಗಳಿಸಲಿಲ್ಲ. ಸಿನಿಮಾಗಳ ಪಾತ್ರಗಳ ಮೂಲಕವೇ ಸಹೃದಯರಿಗೆ ಹತ್ತಿರವಾದರು. ತೆರೆಯ ಮೇಲೆ ನಾವು ನೋಡುತ್ತಿರುವ ವ್ಯಕ್ತಿ ಬೇರೆ, ನಿಜಜೀವನದ ನಾಯಕ ಬೇರೆ ಎಂದು ನೋಡುಗರಿಗೆ ಅನ್ನಿಸಲಿಲ್ಲ. ಪಾತ್ರಗಳ ಮೂಲಕವೇ ನೆಚ್ಚಿನನಟ ತಮ್ಮೊಂದಿಗೆ ಒಡನಾಡುತ್ತಿದ್ದಾರೆ ಎಂದು ಜನರಿಗೆ ಅನ್ನಿಸಿದ ಕಾರಣದಿಂದಲೇ, 'ಬಂಗಾರದ ಮನುಷ್ಯ'ದಂಥ ಚಿತ್ರ ಯುವಜನರು ತಮ್ಮೂರುಗಳತ್ತ ಹೊರಳಿನೋಡಲು ಪ್ರೇರಣೆಯಾಯಿತು.

ರಾಜ್‌ರ ಬಹುತೇಕ ಚಿತ್ರಗಳು ಕೌಟುಂಬಿಕ ಮೌಲ್ಯವೊಂದನ್ನು ಬಲಪಡಿಸಲು ರೂಪುಗೊಂಡಂತೆ ಕಾಣಿಸುತ್ತವೆ. ಕನ್ನಡದ ಅತ್ಯುತ್ತಮ ಚಿತ್ರಗಳಲ್ಲೊಂದಾದ 'ಹಾಲುಜೇನು'



ರಾಜ್‌ಕುಮಾರ್: ಕನ್ನಡದ ಯೋಗಾಯೋಗ